## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಸ್ಪೆಷಲ್ ಕೇಸ್(ಕರಪ್ಷನ್) ಸಂಖ್ಯೆ: 61/2016

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪಿ.ಕೆ. ಸುದೀಂದ್ರ | ಫ್ರಾಸಾಃ 9 |
| ತಂದೆಯ ಹೆಸರು | : | ಕಾರ್ಯಪ್ಪ ಪಿ.ಕೆ. | ಚಾಸಾಃ 10 |
| ವಯಸ್ಸು | : | 34 ವರ್ಷ | |
| ವೃತ್ತಿ | : | ಕಂದಾಯ ಪರಿವೀಕ್ಷಕ, ಪೊನ್ನಂಪೇಟೆ. | |
| ವಾಸ | : | ಪೊನ್ನಂಪೇಟೆ | |

ಸಾಕ್ಷಿಯನ್ನು ದಿನಾಂಕ **22-12-2023** ರಂದು ಕರೆಯಿಸಿ ಪ್ರಮಾಣ ವಚನ **ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:</u>**

ಫೆಬ್ರವರಿ 2013 ರಿಂದ ಮಾರ್ಚ್ 2014 ರವರೆಗೆ ನಾನು ಗ್ರಾಮ ಲೆಕ್ಕಾಧಿಕಾರಿಯಾಗಿ ಮಡಿಕೇರಿಯ ಎ ಸಿ ಕಛೇರಿಯಲ್ಲಿ ಸೇವೆ ಸಲ್ಲಿಸಿರುತ್ತೇನೆ.

ಚಾಸಾ-11 ನಮ್ಮ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು. ದಿನಾಂಕ 23.05.2013 ರಂದು ಲೋಕಾಯುಕ್ತ ಪೊಲೀಸರು ಮನವಿ ಪತ್ರ ನೀಡಿ ಈ ಪ್ರಕರಣಕ್ಕೆ ಸಂಬಂಸಿದಂತೆ ಸಾಕ್ಷಿದಾರಾಗಿ ಹಾಜರಾಗುವಂತೆ ಕೋರಿದರು.ಆ ಪ್ರಕಾರ ಅದೇ ದಿನ ನಾನು ಮತ್ತು ಚಾಸಾ-11 ರವರು ಲೋಕಾಯುಕ್ತ ಕಛೇರಿಗೆ ಮಧ್ಯಾಹ್ನ 2-30 ಗಂಟೆಗೆ ಹೋದೆವು ಲೋಕಾಯುಕ್ತ ಇನ್ಸ್ಪೆಕ್ಟರು ಅವರ ಬಳಿ ನಾವು ರಿಪೋರ್ಟ್ ಮಾಡಿಕೊಂಡೆವು. ಇನ್ಸ್ಪೆಕ್ಟರು ದಿನಾಂಕ 24-05-2013 ರಂದು ಬೆಳಿಗ್ಗೆ 5-30 ಗಂಟೆಗೆ ಠಾಣೆಗೆ ಹಾಜರಾಗುವಂತೆ ತಿಳಿಸಿದರು. ಅದೇ ಪ್ರಕಾರ ನಾವು ಬೆಳಿಗ್ಗೆ 5-30 ಗಂಟೆಗೆ ಠಾಣೆಗೆ ಹಾಜರಾದೆವು. ನಾವು ಠಾಣೆಗೆ ಹೋದ ನಂತರ ಪೊಲೀಸರು ಮನೋಹಜರ್ ಎಂಬುವರ ಮನೆಗೆ ರೈಡ್ ಗೆ ಹೋಗಬೇಕಾಗಿದೆ ಎಂದು ತಿಳಿಸಿದರು. ಸದರಿ ಮನೋಹರ ರವರ ಮನೆ ಬೋಯಿಕೇರಿ ನಲ್ಲಿ ಇತ್ತು. ನಾವು ಆ ದಿನ 6-30 ರಿಂದ 7-00 ಗಂಟೆ ಸವಯಕ್ಕೆ ಮನೋಹರ ರವರ ಮನೆಗೆ ಹೋದೆವು, ಧರ್ಮೇಂದ್ರ ಎಂಬ ಇನ್ಸ್ಪೆಕ್ಟರು ಸಹ ನಮ್ಮ ಜೊತೆ ಬಂದಿದ್ದರು. ಅಲ್ಲಿ ಮನೋಹರ ರವರಿಗೆ ತಾವು ರೈಡ್ ಮಾಡಲು ಬಂದಿರುವ ವಿಚಾರವನ್ನು ತಿಳಿಸಿ ಸರ್ಚ್ ವಾರೆಂಟನ್ನು ತೋರಿಸಿದರು. ಸದರಿ ಸರ್ಚ್ ವಾರೆಂಟಿಗೆ ನನ್ನ

ಮತ್ತು ಚಾಸಾ-11 ರವರ ಸಹಿಯನ್ನು ತೆಗೆದುಕೊಳ್ಳಲಾಯಿತು. ಮನೋಹರರವರು ಸಹ ಸದರಿ ಸರ್ಚ್ ವಾರೆಂಟಿಗೆ ರುಜು ಮಾಡಿದರು. ಅದನ್ನು ನಿಪಿ-**196** ಎಂದು, ನನ್ನ ಸಹಿ ನಿಪಿ-**196(ಎ)** ಎಂದು ಗುರುತಿಸಲಾಯಿತು. ಆನಂತರ ಲೋಕಾಯುಕ್ತ ಪೊಲೀಸರು ಮನೋಹರ ರವರ ಮನೆಯಲ್ಲಿ ಮೇಜಿನ ಮೇಲಿದ್ದ ಕೆಲವು ದಾಖಲಾತಿಗಳನ್ನು ಅಮಾನತುಪಡಿಸಿಕೊಂಡರು, ಸದರಿ ದಾಖಲೆಗಳಿಗೆ ನಮ್ಮ ಸಹಿಗಳನ್ನು ಸಹ ಪಡೆದರು. 10 ದಾಖಲೆಗಳು ಇದ್ದು, ಅವುಗಳನ್ನು ಪೊಲೀಸರು ಅಮಾನತುಪಡಿಸಿಕೊಂಡರು. 10 ದಾಖಲೆಗಳನ್ನು ಫೈಲನ್ನು ಒಟ್ಟಾಗಿ ನಿಪಿ-**197** ಎಂದು ಗುರುತಿಸಲಾಯಿತು. ಸದರಿ ಪ್ರಕ್ರಿಯೆ ಬಗ್ಗೆ ಪೊಲೀಸರು ಸ್ಥಳದಲ್ಲೆ ಮಹಜರು ಮಾಡಿದರು, ಸದರಿ ಮಹಜರಿಗೆ ನನ್ನ ಮತ್ತು ಶಾಂತಿಯವರ ಸಹಿ ಪಡೆದರು. ಮನೋಹರ ರವರ ಸಹಿಯನ್ನು ಸಹ ಪಡೆದರು. ಸದರಿ ಮಹಜರು ನಿಪಿ-**198** ಎಂದು, ಅದರಲ್ಲಿರುವ ನನ್ನ ಸಹಿ ನಿಪಿ-**198(ಎ)** ಎಂದು ಗುರುತಿಸಲಾಯಿತು.

**ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಪಿ.ಕೆ.ಎಸ್. ವಕೀಲರಿಂದ:**

ಏನೂ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.